# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಶಿವಮೊಗ್ಗ

**ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ–577 204**

**ಇ–ಮೇಲ್:hrm.homamcos@gmail.com, www.mamcos.info, ದೂರವಾಣಿ:08182–250513, 250514**

**ಕ್ರ.ಸಂ/ಮಾಮ್‌ಕೋಸ್/ಸಿಬ್ಬಂದಿ/862/2024–25** **ದಿನಾಂಕ: 05.08.2024**

## ***ನೇಮಕಾತಿ ಪ್ರಕಟಣೆ***

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ ಇದರಲ್ಲಿ ಖಾಲಿ ಇರುವ ಈ ಕೆಳಕಂಡ 21 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸಂಸ್ಥೆಯ ವೆಬ್‌ಸೈಟ್:www.mamcos.info ನಲ್ಲಿ ನೀಡಿರುವ ಲಿಂಕ್ ಮುಖಾಂತರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

| **ಕ್ರ.ಸಂ** | **ಹುದ್ದೆಗಳ ವಿವರ** | **ಸಂಖ್ಯೆ** |
|---|---|---|
| 1 | ಉಪ ಪ್ರಧಾನ ವ್ಯವಸ್ಥಾಪಕರು | 02 |
| 2 | ಸಾಫ್ಟ್‌ವೇರ್ಇಂಜಿನಿಯರ್ | 01 |
| 3 | ವ್ಯವಸ್ಥಾಪಕರು | 06 |
| 4 | ಹಿರಿಯ ಸಹಾಯಕರು | 04 |
| 5 | ಕಿರಿಯ ಸಹಾಯಕರು | 07 |
| 6 | ವಾಹನ ಚಾಲಕರು | 01 |
| **ಒಟ್ಟು** | | **21** |

ಈ ಮೇಲ್ಕಂಡ ಹುದ್ದೆಗಳ ನೇರ ನೇಮಕಾತಿಗೆ ಪ್ರಕಟಣೆ ಹೊರಡಿಸಿರುವ ವೃಂದವಾರು ಹುದ್ದೆಗಳ ಸಂಖ್ಯೆ, ವಿದ್ಯಾರ್ಹತೆ, ವಯೋಮಿತಿ, ಅರ್ಜಿ ಶುಲ್ಕ ಇತ್ಯಾದಿ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. **ಉಪ ಪ್ರಧಾನ ವ್ಯವಸ್ಥಾಪಕರು (ಲೆಕ್ಕ ಪತ್ರ ವಿಭಾಗ)**: 01 ಹುದ್ದೆ

   **ವೇತನ ಶ್ರೇಣಿ:** ರೂ.40,900–78,200

   **ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಢೀಕೃತ ವೇತನ:** ರೂ.38,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ವಾಣಿಜ್ಯ ವಿಷಯದಲ್ಲಿ ಎಂ.ಕಾಂ ಸ್ನಾತಕೋತ್ತರ ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಅಥವಾ ಬಿ.ಕಾಂ ಪದವಿಯೊಂದಿಗೆ The Institute of Chartered Accountants of India (ICAI) ರಿಂದ ಅಂಗೀಕೃತಗೊಂಡ ವ್ಯಕ್ತಿ/ಸಂಸ್ಥೆಯಲ್ಲಿ 12 ತಿಂಗಳಿಗೆ ಕಡಿಮೆಯಿಲ್ಲದ ಅವಧಿಗೆ ಆರ್ಟಿಕಲ್‌ಶಿಪ್ ಪೂರ್ಣಗೊಳಿಸಿರತಕ್ಕದ್ದು ಮತ್ತು ಲೆಕ್ಕಪತ್ರ ವಿಭಾಗದಲ್ಲಿ ಕನಿಷ್ಠ ಐದು ವರ್ಷ ಮೇಲ್ಪಟ್ಟು ಕಾರ್ಯ ನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

**2. ಉಪ ಪ್ರಧಾನ ವ್ಯವಸ್ಥಾಪಕರು(ಮಾರಾಟ ವಿಭಾಗ)**– 01 ಹುದ್ದೆ

**ವೇತನ ಶ್ರೇಣಿ:** ರೂ.40,900–78,200

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಡೀಕೃತ ವೇತನ:** ರೂ.38,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಎಂ.ಬಿ.ಎ. ಸ್ನಾತಕೋತ್ತರ ಪದವಿ ಪಡೆದಿದ್ದು, ಮಾರ್ಕೆಟಿಂಗ್ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಓದಿರತಕ್ಕದ್ದು ಹಾಗೂ ಈ ವಿಷಯದಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಹಾಗೂ ಕನಿಷ್ಠ ಐದು ವರ್ಷ ಮಾರ್ಕೆಟಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

**3. ಸಾಫ್ಟವೇರ್ ಇಂಜಿನಿಯರ್ – 01 ಹುದ್ದೆ**

**ವೇತನ ಶ್ರೇಣಿ:** ರೂ.37,900–70,850

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಡೀಕೃತ ವೇತನ:** ರೂ.37,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ.ಇ/ಬಿ.ಟೆಕ್ ಕಂಪ್ಯೂಟರ್ ಸೈನ್ಸ್ ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಮತ್ತು ಅಭ್ಯರ್ಥಿಗಳು ಈ ಕೆಳಕಂಡ ಪ್ರತ್ಯೇಕ ವಿಷಯಗಳಲ್ಲಿ ಪರಿಣತಿಯನ್ನು ಹೊಂದಿರತಕ್ಕದ್ದು ಹಾಗೂ ಕನಿಷ್ಠ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.

1. **Networking experience :** Network protocols, Network devices, Network topologies, Network security, Network troubleshooting
2. **Experience with OS installation, configuration and administration:** Understanding of OS internals (file systems, process management, memory management)
3. Troubleshooting OS-related issues
4. Hardware installation and troubleshooting
5. Programming language
6. Software Testing
7. Microsoft Applications

## 4. ವ್ಯವಸ್ಥಾಪಕರು (ಕಾನೂನು ವಿಭಾಗ)– 01 ಹುದ್ದೆ

**ವೇತನ ಶ್ರೇಣಿ:** ರೂ.30,350–58,250

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಢೀಕೃತ ವೇತನ:** ರೂ.30,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಮತ್ತು ಕನಿಷ್ಠ ಮೂರು ವರ್ಷಗಳ ಕಾಲ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಪ್ರತಿನಿಧಿಸಿರುವ ಅನುಭವ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

5. **<u>ವ್ಯವಸ್ಥಾಪಕರು– 05 ಹುದ್ದೆ</u>**

**ವೇತನ ಶ್ರೇಣಿ:** ರೂ.30,350–58,250

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಢೀಕೃತ ವೇತನ:** ರೂ.30,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಮತ್ತು ಕನಿಷ್ಠ ಮೂರು ವರ್ಷಗಳ ಕಾಲ ಲೆಕ್ಕಪತ್ರ ಅಥವಾ ಆಡಳಿತ ವಿಭಾಗದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

6. **<u>ಹಿರಿಯ ಸಹಾಯಕರು – 04 ಹುದ್ದೆ</u>**

**ವೇತನ ಶ್ರೇಣಿ:** ರೂ.27,650–52,650

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಢೀಕೃತ ವೇತನ:** ರೂ.27,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಮತ್ತು ಕನಿಷ್ಠ ಎರಡು ವರ್ಷಗಳ ಕಾಲ ಲೆಕ್ಕಪತ್ರ ಅಥವಾ ಆಡಳಿತ ವಿಭಾಗದಲ್ಲಿ ಕಾರ್ಯನಿರ್ವಹಣೆಯ ಅನುಭವ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

7. **<u>ಕಿರಿಯ ಸಹಾಯಕರು– 07 ಹುದ್ದೆ</u>**

**ವೇತನ ಶ್ರೇಣಿ:** ರೂ.21,400–42,000

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಢೀಕೃತ ವೇತನ:** ರೂ.21,000/–

**ವಿದ್ಯಾರ್ಹತೆ:**

- ❖ ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿಯಲ್ಲಿ ಒಟ್ಟಾರೆಯಾಗಿ ಶೇ.50ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ತೇರ್ಗಡೆಯಾಗಿರತಕ್ಕದ್ದು ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ಸ್‌ನಲ್ಲಿ ಜ್ಞಾನ ಹೊಂದಿರತಕ್ಕದ್ದು.

**8. <u>ವಾಹನ ಚಾಲಕರು– 01 ಹುದ್ದೆ</u>**

**ವೇತನ ಶ್ರೇಣಿ:** ರೂ.19,950–37,900

**ಪರೀಕ್ಷಾರ್ಥ ಅವಧಿಯಲ್ಲಿ ಪಾವತಿಸುವ ಕ್ರೋಡೀಕೃತ ವೇತನ:** ರೂ.18,000/–

**ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳು:**

- ➢ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರತಕ್ಕದ್ದು.
- ➢ ಕಾನೂನುಬದ್ಧ ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ಹೊಂದಿರತಕ್ಕದ್ದು.
- ➢ ಕನ್ನಡ ಭಾಷೆಯನ್ನು ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರತಕ್ಕದ್ದು.
- ➢ ವಾಹನ ಚಾಲನೆಯನ್ನು ನಿರ್ವಹಿಸಲು ಅಡ್ಡಿಪಡಿಸುವಂತಹ ಯಾವುದೇ ಅಂಗ ವೈಕಲ್ಯ ಮತ್ತು ದೈಹಿಕ ನ್ಯೂನತೆ ಹೊಂದಿರತಕ್ಕದ್ದಲ್ಲ.

1. **<u>ನೇಮಕಾತಿಗೆ ಸಂಬಂಧಿಸಿದಂತೆ ಸೂಚನೆಗಳು:–</u>**

1.1 ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಮಾತ್ರವೇ ಸಲ್ಲಿಸತಕ್ಕದ್ದು ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.

1.2 ಅಭ್ಯರ್ಥಿಗಳು ಅರ್ಜಿಯನ್ನು ಅಪೂರ್ಣವಾಗಿ ಹಾಗೂ ಸೂಕ್ತವಲ್ಲದ/ಅಸ್ಪಷ್ಟ ದಾಖಲೆಗಳೊಂದಿಗೆ ಅಥವಾ ತಪ್ಪು/ಅಪೂರ್ಣ ಮಾಹಿತಿಗಳೊಂದಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1.3 ಮಾಮ್‌ಕೋಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮತ್ತು ಇತರೆ ಸಹಕಾರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವವರಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದು.

1.4 ಅಭ್ಯರ್ಥಿಯು ಸಂಬಂಧಪಟ್ಟ ವಿದ್ಯಾರ್ಹತೆಯ ಎಲ್ಲಾ ಅಂಕಪಟ್ಟಿ, ವಿಶ್ವವಿದ್ಯಾನಿಲಯಗಳು ಅಭ್ಯರ್ಥಿಗಳಿಗೆ ಪ್ರದಾನ ಮಾಡುವ ಪದವಿ ಕುರಿತ ಘಟಿಕೋತ್ಸವ ಪ್ರಮಾಣ ಪತ್ರವನ್ನು ಮತ್ತು ಇತರೆ ಎಲ್ಲಾ ದಾಖಲಾತಿಗಳ ಮೂಲ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು. ಅಪ್‌ಲೋಡ್ ಮಾಡುವಾಗ ಒಂದೊಂದು ವಿದ್ಯಾರ್ಹತೆ/ಕೋರ್ಸ್‌ನ ಎಲ್ಲಾ ಅಂಕಪಟ್ಟಿಗಳನ್ನು ಒಂದು ಫೈಲ್ ಆಗಿ ಅಪ್‌ಲೋಡ್ ಮಾಡತಕ್ಕದ್ದು. (ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಸೇರಿದಂತೆ ಆಯಾ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಪ್ರತ್ಯೇಕವಾಗಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು)

1.5 ಮೂಲ ದಾಖಲಾತಿಗಳನ್ನು ನಂತರದಲ್ಲಿ ಸಂಘವು ಕೇಳಿದಾಗ ಅಥವಾ ಮೌಖಿಕ ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

1.6 ಕಂಪ್ಯೂಟರ್ ವಿದ್ಯಾಭ್ಯಾಸ/ಆಪರೇಶನ್ಸ್/ಅಪ್ಲಿಕೇಷನ್ಸ್ ಕುರಿತು ಮಾನ್ಯತೆ ಪಡೆದ ಸಂಸ್ಥೆಯಿಂದ ಪರೀಕ್ಷೆ ತೇರ್ಗಡೆಯಾದ ಬಗ್ಗೆ ಪಡೆದಿರುವ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು.

1.7 ವಾಹನ ಚಾಲಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಯಾವುದೇ ಅಂಗ ವೈಕಲ್ಯ ಮತ್ತು ದೈಹಿಕ ನ್ಯೂನತೆ ಹೊಂದಿರದ ಕುರಿತು ಸರ್ಕಾರದ ಅಸಿಸ್ಟಂಟ್ ಸರ್ಜನ್ ಹುದ್ದೆಗಿಂತ ಕಡಿಮೆ ಇಲ್ಲದ ದರ್ಜೆಯ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸತಕ್ಕದ್ದು.

1.8 ಅಭ್ಯರ್ಥಿಗಳು ಮೇಲ್ಕಂಡಂತೆ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಮುದ್ರಿಸಿ, ಅರ್ಜಿಯ ಒಂದು ಪ್ರತಿಯನ್ನು ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಸ್ವಯಂ ದೃಡೀಕರಿಸಿ ಡಿಮ್ಯಾಂಡ್ ಡ್ರಾಫ್ಟ್/ರಶೀದಿ ಪ್ರತಿ ಸೇರಿದಂತೆ (QR Code Scan ಮೂಲಕ ಪಾವತಿಸಿದಲ್ಲಿ) **ದಿನಾಂಕ 24 ಅಗಸ್ಟ್ 2024ರ ಒಳಗಾಗಿ ನೋಂದಾಯಿತ ಅಂಚೆ ಮೂಲಕ ಮಾತ್ರವೇ** **ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇರ ನೇಮಕಾತಿ ಸಮಿತಿ, ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಶಿವಮೊಗ್ಗ, ಎ.ಪಿ.ಎಂ.ಸಿ ಯಾರ್ಡ್, ಸಾಗರ ರಸ್ತೆ, ಶಿವಮೊಗ್ಗ– 577204** ಈ ವಿಳಾಸಕ್ಕೆ ಕಳುಹಿಸತಕ್ಕದ್ದು. ಇನ್ನೊಂದು ಪ್ರತಿಯನ್ನು ಅಭ್ಯರ್ಥಿಗಳು ತಮ್ಮಲ್ಲಿಯೇ ಕಾಯ್ದಿರಿಸಿಕೊಳ್ಳತಕ್ಕದ್ದು.

1.9 ಈಗಾಗಲೇ ಮಾಮ್‌ಕೋಸ್ ಸಂಸ್ಥೆಯಲ್ಲಿ ಹಾಗೂ ಬೇರೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧಿಕಾರದ/ಸಂಸ್ಥೆಯಿಂದ ಅನುಮತಿಯನ್ನು ಪಡೆದು, ನಿರಾಪೇಕ್ಷಣಾ ಪತ್ರವನ್ನು ಸಲ್ಲಿಸತಕ್ಕದ್ದು.

1.10 ಅಭ್ಯರ್ಥಿಗಳು ಮೇಲ್ಕಂಡ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

**1.11 ಅರ್ಜಿ ಸಲ್ಲಿಸಿರುವ ಪ್ರತಿ ಹುದ್ದೆಗೂ ಪ್ರತ್ಯೇಕವಾದ ಲಕೋಟೆಯನ್ನು ಸಲ್ಲಿಸತಕ್ಕದ್ದು ಮತ್ತು ಅರ್ಜಿಯ ಪ್ರತಿಯನ್ನು ಸಲ್ಲಿಸುವ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದೀರಿ ಎಂಬ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.**

1.12 ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅರ್ಹತೆ ಪಡೆದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.

1.13 ಅರ್ಜಿ ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 20 ಅಗಸ್ಟ್ 2024ರ ರಾತ್ರಿ 11:59ರ ಒಳಗಾಗಿ ಪಾವತಿಸತಕ್ಕದ್ದು. ನಿಗದಿತ ಅರ್ಜಿ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.

1.14 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.

1.15 ಕನ್ನಡ ಭಾಷೆಯ ಪರಿಜ್ಞಾನ ಕಡ್ಡಾಯವಾಗಿದ್ದು, ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರತಕ್ಕದ್ದು.

1.16 ನೇಮಕಾತಿಯಲ್ಲಿ ಸಂಘಕ್ಕೆ ಯಾವುದೇ ಮೀಸಲಾತಿ ನಿಯಮಗಳು ಅನ್ವಯಿಸುವುದಿಲ್ಲ.

1.17 ಮೇಲ್ಕಂಡ ಹುದ್ದೆಗಳಿಗೆ ನೇಮಕಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಗೆ **"ಪರೀಕ್ಷಾರ್ಥ ಅವಧಿ"**(Probationary Period) ಎಂದು ಪ್ರಾರಂಭದಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಪರೀಕ್ಷಾರ್ಥ ಅವಧಿಯಲ್ಲಿ ಸಂಘದಲ್ಲಿನ ಅವರ ಕೆಲಸವು ಪೂರ್ಣ ತಾತ್ಕಾಲಿಕವಾಗಿರುತ್ತದೆ ಮತ್ತು ಈ ಅವಧಿಯಲ್ಲಿ ಅಭ್ಯರ್ಥಿಗಳು ಸಂಘದಲ್ಲಿನ ಕೆಲಸವನ್ನು ನಿರ್ವಹಿಸಲು ಅಸಮರ್ಥರೆಂದು ಕಂಡುಬಂದಲ್ಲಿ ಆಡಳಿತ ಮಂಡಲಿಯು ಕಾರಣವನ್ನು ದಾಖಲಿಸಿ ಅವರನ್ನು ಕೆಲಸದಿಂದ ತೆಗೆದು ಹಾಕಬಹುದು. ಪರೀಕ್ಷಾರ್ಥ ಅವಧಿಯಲ್ಲಿ ನೌಕರನು

ಯಾವುದೇ ಅಶಿಸ್ತಿಗೆ ಅಥವಾ ದುರ್ವರ್ತನೆಗೆ ಕಾರಣನಾದಲ್ಲಿ ಅವರ ವಿರುದ್ಧ ಶಿಸ್ತು ವಿಚಾರಣೆಯನ್ನು ನಿಯಮಾನುಸಾರ ನಡೆಸಿ, ಆರೋಪ ಸಾಬೀತಾದಲ್ಲಿ ಅವನನ್ನು ಕೆಲಸದಿಂದ ವಜಾಗೊಳಿಸಲಾಗುವುದು.

1.18 ಮೇಲ್ಕಂಡ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಎರಡು ವರ್ಷದ **'ಪರೀಕ್ಷಾರ್ಥ ಅವಧಿ'** (Probationary Period) ಯಲ್ಲಿ ಮೇಲ್ಕಂಡಂತೆ ಹುದ್ದೆವಾರು ನಮೂದಿಸಿದಂತೆ ಮಾಹೆಯಾನ **'ಕ್ರೋಢೀಕೃತ ವೇತನ'**ವನ್ನು ಮಾತ್ರ ಪಾವತಿಸಲಾಗುತ್ತದೆ. ಪರೀಕ್ಷಾರ್ಥ ಅವಧಿಯನ್ನು ಪೂರೈಸಿದ ದಿನಾಂಕದಿಂದ ನಿಗದಿಪಡಿಸಲಾದ ವೇತನ ಶ್ರೇಣಿಯನ್ನು ನೀಡಲಾಗುವುದು. ಕ್ರೋಢೀಕೃತ ವೇತನವು ನಿಯಮಾನುಸಾರ ಪಾವತಿಸುವ ಪಿ.ಎಫ್., ಇಎಸ್‌ಐ, ವೃತ್ತಿತೆರಿಗೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

1.19 ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳಲ್ಲಿ ಅಪ್‌ಲೋಡ್ ಮಾಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಲಿಖಿತ ಪರೀಕ್ಷೆಗೆ ಅರ್ಹರೇ ಎಂಬುದನ್ನು ಪರಿಶೀಲಿಸಿ, ಅರ್ಹರೆಂದು ಕಂಡು ಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಪ್ರವೇಶ ಪತ್ರವನ್ನು ಕಳುಹಿಸಲಾಗುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು, ವಯೋಮಿತಿ, ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

1.20 ನೇಮಕಾತಿಯ ಕುರಿತು ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೆ ತಿರಸ್ಕರಿಸುವ ಅಧಿಕಾರ ಸಂಘದ ಸಿಬ್ಬಂದಿ ನೇರ ನೇಮಕಾತಿ ಸಮಿತಿಗೆ ಇರುತ್ತದೆ. ಅಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ದೃಢೀಕರಿಸದೇ ಸಲ್ಲಿಸಿದ ಅರ್ಜಿಗಳನ್ನು ಹಾಗೂ ನಿಗದಿತ ಅವಧಿಯ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದು ಪಡಿಸುವ ಹಾಗೂ ನಿಬಂಧನೆಗಳನ್ನು ಬದಲಿಸುವ ಸಂಪೂರ್ಣ ಹಕ್ಕನ್ನು ಸಿಬ್ಬಂದಿ ನೇರ ನೇಮಕಾತಿ ಸಮಿತಿಯು ಹೊಂದಿರುತ್ತದೆ.

2. **ವಯೋಮಿತಿ:–**

ದಿನಾಂಕ 05 ಆಗಸ್ಟ್ 2024ಕ್ಕೆ ಇದ್ದಂತೆ ಅಭ್ಯರ್ಥಿಗಳ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಜಾತಿ | ಕನಿಷ್ಠ ವಯೋಮಿತಿ | ಗರಿಷ್ಠ ವಯೋಮಿತಿ |
|---|---|---|---|
| 1 | ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ | 18 | 35 |
| 2 | ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ | 18 | 38 |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗ | 18 | 40 |

**3. ಅರ್ಜಿ ಶುಲ್ಕ:–**

| | | |
|---|---|---|
| **1** | ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ | ರೂ.1,000–00 + 18% ಜಿ.ಎಸ್.ಟಿ. ಸೇರಿ ಒಟ್ಟು **ರೂ.1,180.00** |
| **2** | ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ | ರೂ.1,500–00 + 18% ಜಿ.ಎಸ್.ಟಿ. ಸೇರಿ ಒಟ್ಟು **ರೂ.1,770.00** |

ಅಭ್ಯರ್ಥಿಗಳು ಮೇಲ್ಕಂಡ ಅರ್ಜಿ ಶುಲ್ಕವನ್ನು ಸಂಘದ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ನೀಡಿರುವ QR Code ನ್ನು Scan ಮಾಡುವ ಮೂಲಕ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಬಹುದು.

ಡಿಮ್ಯಾಂಡ್ ಡ್ರಾಫ್ಟ್ ಅನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಯಾಗುವಂತೆ **ವ್ಯವಸ್ಥಾಪಕ ನಿರ್ದೇಶಕರು, ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ** ಅಥವಾ **THE MANAGING DIRECTOR, THE MAMCOS LTD., SHIVAMOGGA** ಇವರ ಹೆಸರಿಗೆ ಪಡೆಯತಕ್ಕದ್ದು ಮತ್ತು ಡಿ.ಡಿ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿ, ಅರ್ಜಿಯೊಂದಿಗೆ ಮೂಲ ಡಿ.ಡಿ.ಯನ್ನು ಲಗತ್ತಿಸತಕ್ಕದ್ದು.

QR Code ನ್ನು Scan ಮಾಡುವ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಿದಲ್ಲಿ, ಅದರ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿ, ಅರ್ಜಿಯೊಂದಿಗೆ ರಶೀದಿಯ ಪ್ರತಿಯನ್ನು ಲಗತ್ತಿಸತಕ್ಕದ್ದು.

**4. ಪರೀಕ್ಷಾ ವಿಧಾನ:–**

4.1 ಕಿರಿಯ ಸಹಾಯಕರು ಮತ್ತು ಮೇಲ್ಪಟ್ಟ ಹುದ್ದೆಗಳಿಗೆ ಲಿಖಿತ ಪರೀಕ್ಷೆಯು ವಸ್ತು ನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆಯನ್ನು ಹೊಂದಿದ್ದು, ಕೆಳಕಂಡಂತೆ ಒಟ್ಟು 200 ಅಂಕಗಳದ್ದಾಗಿರುತ್ತದೆ.

1) ಕನ್ನಡ ಭಾಷೆ ಕುರಿತ ಪರೀಕ್ಷೆಗೆ – 50 ಅಂಕಗಳು

2) ಸಾಮಾನ್ಯ ಇಂಗ್ಲೀಷ್ ಭಾಷೆ ಕುರಿತ ಪರೀಕ್ಷೆಗೆ – 25 ಅಂಕಗಳು

3) ಸಾಮಾನ್ಯ ಜ್ಞಾನ ಕುರಿತ ಪರೀಕ್ಷೆಗೆ – 25 ಅಂಕಗಳು

4) ಸಹಕಾರ ವಿಷಯ ಕುರಿತ ಪರೀಕ್ಷೆಗೆ – 50 ಅಂಕಗಳು

5) ಭಾರತ ಸಂವಿಧಾನ ಕುರಿತ ಪರೀಕ್ಷೆಗೆ – 25 ಅಂಕಗಳು

6) ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯದ ಕುರಿತ ಪರೀಕ್ಷೆಗೆ – 25 ಅಂಕಗಳು

4.2 ವಾಹನ ಚಾಲಕರ ಹುದ್ದೆಯ ಲಿಖಿತ ಪರೀಕ್ಷೆ ಸೇರಿದಂತೆ ಎಲ್ಲಾ ಹುದ್ದೆಗಳ ಲಿಖಿತ ಪರೀಕ್ಷೆಯನ್ನು ಬಾಹ್ಯ ಮೂಲಗಳಿಂದ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಹತಾದಾಯಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅವರನ್ನು 1:10ರ ಅನುಪಾತದಲ್ಲಿ ಮೆರಿಟ್ ಆಧಾರದಲ್ಲಿ ಮಾತ್ರ ಲಿಖಿತ ಪರೀಕ್ಷೆಗೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಮೌಖಿಕ ಸಂದರ್ಶನಕ್ಕೆ ಗರಿಷ್ಠ 15 ಅಂಕಗಳನ್ನು ನಿಗದಿಪಡಿಸಲಾಗಿದ್ದು, ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.

4.3 ಲಿಖಿತ ಪರೀಕ್ಷೆಯ ದಿನಾಂಕ, ವೇಳೆ, ಸ್ಥಳ ಇವುಗಳ ವಿವರಗಳನ್ನು ಅರ್ಹ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಅರ್ಜಿಯಲ್ಲಿ ನೀಡಲಾದ ಇ–ಮೇಲ್ ಅಥವಾ ವಾಟ್ಸಾಪ್ ಹೊಂದಿರುವ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

4.4 ಸಾಫ್ಟ್‌ವೇರ್ ಇಂಜಿನಿಯರ್ ಹುದ್ದೆಯ ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ 1:5ರ ಆಧಾರದ ಮೇಲೆ ಸಂಬಂಧಿಸಿದ ಹುದ್ದೆಯ ಕಂಪ್ಯೂಟರ್ ನೈಪುಣ್ಯತೆಯ ಪರೀಕ್ಷೆಯನ್ನು ಮತ್ತು ಸಂದರ್ಶನವನ್ನು ನಡೆಸಲಾಗುವುದು. ನೈಪುಣ್ಯತೆಯ ಪರೀಕ್ಷೆಯ ಹಾಗೂ ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರದಲ್ಲಿ ತಿಳಿಸಲಾಗುವುದು.

4.5 ವಾಹನ ಚಾಲಕರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆಗಾಗಿ, 30 ಅಂಕಗಳ ಕನ್ನಡ ಭಾಷೆ ಕುರಿತಾದ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ

ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶನವನ್ನು ಮತ್ತು ವಾಹನ ಚಾಲನಾ ಪರೀಕ್ಷೆ ನಡೆಸಲಾಗುವುದು.

**5. <u>ಅರ್ಜಿ ಸಲ್ಲಿಸುವ ವಿಧಾನ:–</u>**

ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಸಂಸ್ಥೆಯ ಅಧಿಕೃತ ವೆಬ್‌ಸೈಟ್:www.mamcos.info ಅನ್ನು ತೆರೆದು **'MAMCOS Recruitment 2024'** ಲಿಂಕನ್ನು ಕ್ಲಿಕ್ ಮಾಡುವುದರ ಮೂಲಕ ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸತಕ್ಕದ್ದು.

| | |
|---|---|
| ಪತ್ರಿಕಾ ಪ್ರಕಟಣೆ ದಿನಾಂಕ | **05.08.2024** |
| ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | **05.08.2024** |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **20.08.2024** |
| ಶುಲ್ಕ ಪಾವತಿಸಲು ಕೊನೆಯ ದಿನಾಂಕ | **20.08.2024** |

**<u>ವಿಶೇಷ ಸೂಚನೆ:</u>**

***ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಉಂಟಾದಲ್ಲಿ ಮೊಬೈಲ್ ಸಂಖ್ಯೆ:9449863254 ಯನ್ನು ಬೆಳಗ್ಗೆ 10.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದಾಗಿರುತ್ತದೆ.***

ಸಹಿ/–
ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇರ ನೇಮಕಾತಿ ಸಮಿತಿ
ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮಾಮ್‌ಕೋಸ್ ನಿ., ಶಿವಮೊಗ್ಗ

***ಅನುಬಂಧ–1***

**ಪ್ರಸ್ತುತವಾಗಿ ಸಂಘ/ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆಯಬೇಕಾದ ನಿರಾಪೇಕ್ಷಣಾ/ಅನುಮತಿ ಪತ್ರದ ನಮೂನೆ**

ಸಂಖ್ಯೆ: ದಿನಾಂಕ:

**ನಿರಾಪೇಕ್ಷಣಾ/ಅನುಮತಿ ಪತ್ರ**

ಶ್ರೀ/ಶ್ರೀಮತಿ/ಕು. ______________________ ರವರು ______________________ ರಾಜ್ಯ/ಕೇಂದ್ರ ಸರ್ಕಾರ/ಸಂಘ/ಸಂಸ್ಥೆಯಲ್ಲಿ ದಿನಾಂಕ: ________ ರಿಂದ ದಿನಾಂಕ: _______ ರವರೆಗೆ ________ ಹುದ್ದೆಯಲ್ಲಿ ಖಾಯಂ/ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಶಿವಮೊಗ್ಗ ಇದರ ನೇಮಕಾತಿ ಪ್ರಕಟಣೆ ಸಂಖ್ಯೆ/ಮಾಮ್‌ಕೋಸ್/ಸಿಬ್ಬಂದಿ/862/2024–25 ದಿನಾಂಕ: 05–08–2024ರಂತೆ ಅರ್ಜಿ ಆಹ್ವಾನಿಸಿರುವ ______________ ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ಇಲಾಖೆಯಿಂದ ಇವರಿಗೆ ಅನುಮತಿ ನೀಡಲಾಗಿದೆ.

**ಸಹಿ**
**ಸಂಸ್ಥೆಯ ಮೇಲಾಧಿಕಾರಿಯ**
**ಹೆಸರು ಮತ್ತು ಮೊಹರು**
**ಕಚೇರಿ ದೂರವಾಣಿ ಸಂಖ್ಯೆ:**

***ಅನುಬಂಧ-2***

**ಸೇವಾನುಭವ ಪ್ರಮಾಣ ಪತ್ರದ ನಮೂನೆ**

ಶ್ರೀ/ಶ್ರೀಮತಿ/ಕು. ____________ ಬಿನ್____________ ಇವರು ದಿನಾಂಕ ___________ ರಿಂದ ____________ ರವರೆಗೆ (ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ) ___________________________ ಸಂಸ್ಥೆಯಲ್ಲಿ ________________________ ಆಗಿ ಕಾರ್ಯ ನಿರ್ವಹಿಸಿರುತ್ತಾರೆ/ ನಿರ್ವಹಿಸುತ್ತಿದ್ದಾರೆ ಎಂದು ಈ ಮೂಲಕ ದೃಢೀಕರಿಸಲಾಗಿದೆ. ಈ ಅವಧಿಯಲ್ಲಿ ಸದರಿಯವರ ಸೇವೆಯು ತೃಪ್ತಿಕರವಾಗಿರುತ್ತದೆ.

ದಿನಾಂಕ:

ಸ್ಥಳ: ಸಂಸ್ಥೆಯ ಮುಖ್ಯಸ್ಥರ ಸಹಿ ಮತ್ತು

ಮೊಹರು

ಕಚೇರಿ ದೂರವಾಣಿ ಸಂಖ್ಯೆ